

## ‘ಸತ್ಯಮೇವ’ದ ಜಾನ್

ದೇಶಭಕ್ತಿಯ ಧಾಳಾದ ಪ್ರದರ್ಶನ ಮಾಡುವ ಕಮರ್ಷಿಯಲ್ ಚಿತ್ರಗಳಿಗೆ ಶುಕ್ರದೆಸೆ ಶುರುವಾಗಿ ವರ್ಷ ಉರುಳಿದೆ. ಇನ್ನೂ ಇಂತಹ ಚಿತ್ರಗಳ ಸರಣಿ ನಿಂತಿಲ್ಲ. ಕಳೆದ ವರ್ಷ ಸೂಪರ್‌ಹಿಟ್ ಆದ ‘ಸತ್ಯವೇಮ ಜಯತೆ’ ಅಂತಹ ಚಿತ್ರಗಳಲ್ಲಿ ಒಂದು. ಬಿಡುಗಡೆಯಾದ ಮೊದಲ ದಿನವೇ ಆ ಚಿತ್ರ 20 ಕೋಟಿ ರೂಪಾಯಿ ದೋಚಿದ್ದು, ಜಾನ್‌ನ ಯಾವುದೇ ಚಿತ್ರದ ಅತ್ಯಧಿಕ ಆರಂಭಿಕ ದಿನದ ಗಳಿಕೆ ಎನ್ನಿಸಿಕೊಂಡಿತ್ತು. ಈಗ ‘ಸತ್ಯಮೇವ ಜಯತೆ–2’ ಚಿತ್ರೀಕರಣಕ್ಕೆ ತಂಡ ಸಿದ್ಧವಾಗಿದೆ.

ಭ್ರಷ್ಟರನ್ನು ಕಂಡಲ್ಲಿ ಗುಂಡಿಕ್ಕಿ ಕೊಲ್ಲುವ ಪೊಲೀಸ್ ಅಧಿಕಾರಿಯ ಪಾತ್ರ ಜಾನ್ ಅಬ್ರಹಾಂಗೆ ಹೊಸ ಇಮೇಜ್ ಕಲ್ಪಿಸಿತ್ತು. ಟಿ ಸಿರೀಸ್ ನಿರ್ಮಿಸುತ್ತಿರುವ ಈ ಚಿತ್ರವನ್ನು ಮಿಲಾಪ್ ಜವೇರಿ ನಿರ್ದೇಶಿಸುತ್ತಿದ್ದಾರೆ. ಅಂದ ಹಾಗೆ ‘ಸತ್ಯಮೇವ ಜಯತೆ’ ಮೊದಲ ಭಾಗದಲ್ಲಿ ನೋರಾ ಫತೇಹಿ ‘ದಿಲ್‌ಬರ್ ದಿಲ್‌ಬರ್’ ಎಂಬ ಹಳೇ ಸೂಪರ್‌ಹಿಟ್ ಹಾಡಿನ ರಿಮಿಕ್ಸ್‌ನಲ್ಲಿ ಕುಣಿದದ್ದು ದೊಡ್ಡ ಆಕರ್ಷಣೆಯಾಗಿತ್ತು. ‘ಸತ್ಯಮೇವ..’ 2ನೇ ಭಾಗದಲ್ಲೂ ನೋರಾಳ ಡ್ಯಾನ್ಸ್ ಇರಬಹುದೆ ಎನ್ನುವ ಕುತೂಹಲ ಅಭಿಮಾನಿಗಳದ್ದು.

ಇತ್ತೀಚೆಗೆ ಗುಂಪು ನಾಯಕರ ಚಿತ್ರಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿರುವ ಜಾನ್ ಅಬ್ರಹಾಂ ಅಂತೂ ಈ ಹೊಸ ಚಿತ್ರದ ಬಗ್ಗೆ ಸಾಕಷ್ಟು ಥ್ರಿಲ್ ಆಗಿದ್ದಾನಂತೆ. ‘ಸತ್ಯ ಮತ್ತೆ ಗೆಲ್ಲುತ್ತದೆ. ಮುಂದಿನ ವರ್ಷ ಗಾಂಧಿ ಜಯಂತಿಯಂದು ಮತ್ತೆ ಮರಳುತ್ತೇನೆ’ ಎಂದು ಈಗಾಗಲೆ ಆತ ಟ್ವೀಟ್ ಮಾಡಿದ್ದಾನೆ. ನಾಯಕಿ ಪಾತ್ರಧಾರಿ ದಿವ್ಯಾ ಖೋಸ್ಲಾ ಕೂಡಾ ಪ್ರಚಾರಕ್ಕೆ ಟ್ವಿಟರ್ ಮೊರೆ ಹೊಕ್ಕಿದ್ದು, ‘ತನ್, ಮನ್, ಧನ್ ಸೆ ಬಢ್ಕರ್ ಜನ್, ಗಣ್, ಮನ್. ರಿಟರ್ನಿಂಗ್ ನೆಕ್ಸ್ಟ್ ಗಾಂಧಿ ಜಯಂತಿ’ ಎಂದಾಕೆ ಖುಷಿ ಹಂಚಿಕೊಂಡಿದ್ದಾಳೆ.

■ ಹನಿ

## ಮಿಂಚುತ್ತಿರುವ ನೋರಾ

ಸಲ್ಮಾನ್ ಖಾನ್ ಜೊತೆಗೆ ‘ಭಾರತ್’ ಸಿನಿಮಾದಲ್ಲಿ ಅಭಿನಯಿಸಿದ ಬಳಿಕ ಬಾಲಿವುಡ್‌ನಲ್ಲಿ ನೋರಾ ಫತೇಹಿಯ ಅದೃಷ್ಟ ಖುಲಾಯಿಸಿದಂತಿದೆ. ‘ಬಾಟ್ಲಾ ಹೌಸ್’ನಲ್ಲಿ ಈಕೆಯ ಕುಣಿತ ಮತ್ತು ಅಭಿನಯಕ್ಕೆ ಫುಲ್ ಮಾರ್ಕ್ಸ್ ಸಿಕ್ಕಿದೆ. ಆಕೆಯ ಕುಣಿತದ ‘ಓ ಸಾಕಿ’ ಹಾಡು ತುಂಬ ಜನಪ್ರಿಯವೂ ಆಗಿದೆ. ಈ ಮಧ್ಯೆ ನೋರಾಳ ಡ್ಯಾನ್ಸ್ ಸಾಮರ್ಥ್ಯವನ್ನು ಇನ್ನಷ್ಟು ಪ್ರಚುರಪಡಿಸಿದ ಹೊಸ ವಿಡಿಯೋವೊಂದು ಸುದ್ದಿ ಮಾಡುತ್ತಿದೆ. ಈ ಡ್ಯಾನ್ಸ್ ನಂಬರ್ ಅಂತರರಾಷ್ಟ್ರೀಯ ಮ್ಯೂಸಿಕ್ ಚಾರ್ಟ್‌ನಲ್ಲೂ ಮಿಂಚುತ್ತಿದೆ. ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಆಕೆ ಹಾಕಿರುವ ಈ ವಿಡಿಯೋ ತುಣುಕು ಲಕ್ಷಾಂತರ ಜನರ ಮೆಚ್ಚುಗೆ ಪಡೆದಿದೆ. ಈ ಮಧ್ಯೆ ಬಾಲಿವುಡ್‌ನಲ್ಲಿ ಅವಕಾಶಗಳೂ ಹೆಚ್ಚುತ್ತಿವೆ. ವರುಣ್ ಧವನ್ ಮತ್ತು ಶ್ರದ್ಧಾ ಕಪೂರ್ ನಟಿಸುತ್ತಿರುವ ‘ಸ್ಟ್ರೀಟ್ ಡ್ಯಾನ್ಸರ್’ ಚಿತ್ರದಲ್ಲಿ ನೋರಾಳಿಗೆ ಪ್ರಮುಖ ಪಾತ್ರವೊಂದಿದೆ.

ತೆಲುಗು ಸಿನಿಮಾಗಳಲ್ಲಿ ‘ಐಟಂ ಸಾಂಗ್ ಸಹಿತ ಪಾತ್ರಗಳಿಗೆ ಮೊದಲ ಆದ್ಯತೆ ನೋರಾ’ ಎನ್ನುವಷ್ಟರ ಮಟ್ಟಿಗೆ ಜನಪ್ರಿಯತೆ ಗಳಿಸಿರುವ ಈಕೆ, ಈಗ ಬಾಲಿವುಡ್‌ನಲ್ಲೂ ಸನ್ನಿ ಡಿಯೋಲ್‌ನ ಡಾನ್ಸ್ ಅವಕಾಶಗಳನ್ನು ಕಸಿದುಕೊಂಡಿದ್ದಾಳೆಂದು ಸುದ್ದಿ ಹಬ್ಬಿದೆ. ಕೆನಡಾ ಸಂಜಾತೆ ಮಾಡೆಲಿಂಗ್ ಬೆಡಗಿ, ಗಾಯಕಿಯಾಗಿ ಬಾಲಿವುಡ್‌ನಲ್ಲಿ ಹಿನ್ನೆಲೆ ಹಾಡುಗಳ ಅವಕಾಶಕ್ಕೂ ಕೈಚಾಚಿರುವುದು ಕುತೂಹಲಕರ. ಈಗಾಗಲೆ ಟಿ ಸೀರೀಸ್ ಜೊತೆಗಿನ ಒಪ್ಪಂದದ ಪ್ರಕಾರ ಈಕೆಯ ಹಾಡುಗಳ ವಿಡಿಯೊ ಮತ್ತು ವೆಬ್ ಸರಣಿಗಳು ಒಂದೊಂದಾಗಿ ಹೊರಬರುತ್ತಿವೆ. ಹಾಡು ಮತ್ತು ಕುಣಿತ ಎರಡನ್ನೂ ನಿಸೂರಾಗಿ ನಿಭಾಯಿಸುತ್ತಿರುವ ನೋರಾ, ಸದ್ಯಕ್ಕಂತೂ ಬಾಲಿವುಡ್‌ನಲ್ಲಿ ಮಿಂಚುತ್ತಿರುವ ಬೆಡಗಿ. ■

